

ಯುದ್ಧಪೀಡಿತವಾದದ್ದು. ಸುತ್ತ ಅಲ್ಬೇನಿಯಾ ಮುಸ್ಲೀಮರೇ ಬಹುಸಂಖ್ಯಾತರು. ನೆನಾದ್‌ಗೆ ತನ್ನ ವಾರಿಗೆಯ ಗೆಳೆಯರಿಲ್ಲ. ಏಕಮಾತ್ರ ಗೆಳೆಯ ಅವನಜ್ಜ ಮಿಲುತಿನ್. ಆತ ಹಾಸಿಗೆ ಹಿಡಿದಿದ್ದಾನೆ. ಅಪ್ಪ ವೋಜಾ ಕುಡುಕ. ಉತ್ತರ ಕೊಸೊವದ ಮೆತೊಹಿಜಾ ಎನ್ನುವ ಹಳ್ಳಿಯೊಂದರಲ್ಲಿ ಕುಟುಂಬದ ವಾಸ. ಇವರ ಪುಟ್ಟ ಅಂತಃಕ್ಷೇತ್ರವನ್ನು(ವಿದೇಶಿ) ವಿಶ್ವಸಂಸ್ಥೆಯ ಕೆಎಫ್‌ಒಆರ್(ಕೊಸೊವ ಫೋರ್ಸ್) ಪಡೆ ರಕ್ಷಿಸುತ್ತಿದೆ. ಕೊಸವದಲ್ಲಿ ಶಾಂತಿ ಕಾಪಾಡುವ ಹೊಣೆ ಹೊತ್ತ ಪಡೆ ಇದು. (2004ರ ಆಸುಪಾಸಿನಲ್ಲಿ ನಡೆದ ಕೊಸವೊ ಹಿಂಸೆಯ ಕ್ಷಣಗಳು ನೆನಪಿದ್ದರೆ ಈ ಚಿತ್ರ ತುಂಬ ಹತ್ತಿರವೆನಿಸಬಹುದು.)

ಕ್ಲಾಸ್‌ರೂಮಿನಲ್ಲಿ ನೆನಾದ್ ತನ್ನಜ್ಜನ ಬಗ್ಗೆ ಪ್ರಬಂಧ ಓದುವುದರೊಂದಿಗೆ ಸಿನಿಮಾ ಶುರುವಾಗುತ್ತದೆ. ಯುದ್ಧ ಪೀಡಿತ ಕೊಸವೊದ ಕ್ರಿಶ್ಚಿಯನ್ನರು ವಾಸಿಸುವ ಪ್ರದೇಶಗಳಲ್ಲಿ ರಾತ್ರಿ ಕರೆಂಟ್ ಇರುವ ಹಾಗಿಲ್ಲ. ಕುದುರೆ ಗಾಡಿಗಳಲ್ಲಿ ಓಡಾಡುವಂತಿಲ್ಲ. ವಿಶ್ವಸಂಸ್ಥೆಯ ಸೇನಾ ವಾಹನದಲ್ಲೇ ನೆನಾದ್ ಮತ್ತವನ ಕುಟುಂಬ ಓಡಾಡುವಂಥ ಸ್ಥಿತಿ. ಸೇನಾ ಟ್ಯಾಂಕರ್‌ನಿಂದ ಪುಟ್ಟ ಕಿಂಡಿಯ ಮೂಲಕ ಅವನು ಹೊರಗಿನ ಜಗತ್ತನ್ನು ಸೂಕ್ಷ್ಮವಾಗಿ ನೋಡ ಬಯಸುತ್ತಾನೆ. ಅವನಿಗಿರುವ ಮಾರ್ಗ ಅದೊಂದೇ ಕೂಡ. ನೆನಾದ್ ತನ್ನ ಏಕತಾನತೆಯಿಂದ ಹೊರಬರುವುದಕ್ಕೆ, ತನ್ನಜ್ಜನ ಅಂತ್ಯಕ್ರಿಯೆಗೆ ಪೂರಕ ಶಾಂತಿ ವಾತಾವರಣ ರೂಪಿಸುವ ಯತ್ನವಾಗಿ ಅಲ್ಬೇನಿಯಾದ ಸ್ಥಳೀಯ ಮುಸ್ಲಿಂ ಹುಡುಗರ ಸ್ನೇಹ ಬೆಳೆಸುತ್ತಾನೆ. ಅವರೊಂದಿಗೆ ಗೆಳೆತನಕ್ಕೆ ಒಳಗಿನಿಂದಲೇ ಹಂಬಲಿಸುತ್ತಾನೆ. ಜಗದೆಲ್ಲೆಡೆಗಿನ ಅಲ್ಪಸಂಖ್ಯಾತರು ಮುಖ್ಯವಾಹಿನಿಗೆ ಬರುವ ಸಹಜ ಹಂಬಲವನ್ನೇ ಇದು ಪ್ರತಿನಿಧಿಸುವಂಥದು.

ಒಮ್ಮೆ ಸೇನಾ ಟ್ಯಾಂಕರ್‌ನಲ್ಲಿ ನೆನಾದ್ ಮತ್ತವನ ತಂದೆ ಸ್ಕೂಲಿನಿಂದ ಬರುವಾಗ ಇಬ್ಬರು ಹುಡುಗರು ವ್ಯಾನ್ ಮೇಲೆ ಕಲ್ಲೆಸೆಯುತ್ತಾರೆ. ಅದರಲ್ಲಿಬ್ಬರು ಅಲ್ಬೇನಿಯಾ ಮುಸ್ಲಿಂ ಮಕ್ಕಳು ಮತ್ತು ಒಬ್ಬ ಕುರುಬರ ಹುಡುಗ. ಮುಸ್ಲಿಂ ಹುಡುಗ ಬಶ್ಕಿಂಗೆ ಸೆರ್ಬಿಯನ್ನರ ಮೇಲೆ ಕೋಪ. ತನ್ನ ತಂದೆಯ ಸಾವಿಗೆ ಈ ಸೇನಾ ಸಂಘರ್ಷವೇ ಕಾರಣ ಎನ್ನುವುದು ಅವನ ಒಳಬೇಗುದಿ. 'ನಿನಗೆ ವ್ಯಾನ್ ಒಳಗಿಂದ ನಾವು ಕಲ್ಲು ಬೀಸುವುದು ಕಾಣಿಸುತ್ತಾ?', 'ನಿನ್ನ ಸೈನಿಕರು ನಮಗೂ ವ್ಯಾನ್‌ನಲ್ಲಿ ನಿನ್ನೊಂದಿಗೆ ಸವಾರಿ ಮಾಡಲು ಅವಕಾಶ ನೀಡುತ್ತಾರೋ...' ಎಂದೆಲ್ಲ ನೆನಾದ್‌ನನ್ನು ಕಿಚಾಯಿಸುತ್ತಾರೆ. ಇದು ಯುದ್ಧ ಪೀಡಿತ ಪ್ರದೇಶದ ಮಕ್ಕಳ ಮನಸ್ಥಿತಿ.

ನೆನಾದ್ ಹುಡುಗರೊಂದಿಗೆ ಆಟದಲ್ಲಿ ಮಗ್ನನಾಗಿದ್ದಾನೆ. ಮಕ್ಕಳು ಕಣ್ಣಾಮುಚ್ಚಾಲೆ ನೆವದಲ್ಲಿ ಹೊರಗೆ ನಡೆಯುತ್ತಿರುವ ಯುದ್ಧದ ಅಂತರಂಗವನ್ನೇ ಬದುಕುತ್ತಿದ್ದಾರೇನೋ ಎನ್ನುವಂತೆ ಅನಿಸುತ್ತಿದ್ದಾರೆ. ಮತ್ತೊಂದೆಡೆ ನೆನಾದ್ ಅಜ್ಜ ಕೊನೆಯುಸಿರೆಳೆಯುತ್ತಾನೆ. ಒಬ್ಬ ಪಾದ್ರಿಯನ್ನು ಹುಡುಕಿ ಅಂತ್ಯಸಂಸ್ಕಾರದ ವಿಧಿವಿಧಾನಕ್ಕೆ ವ್ಯವಸ್ಥೆ ಮಾಡಲು ಕುಟುಂಬದವರಿಂದ ಕಸರತ್ತೇ ನಡೆಯುತ್ತದೆ.

ಅಂತ್ಯಸಂಸ್ಕಾರಕ್ಕೆ ಸಿದ್ಧತೆ ಮಾಡಿಕೊಳ್ಳುವಾಗಲೇ ಅಲ್ಲಿಗೆ ಸೈನಿಕರು ನುಗ್ಗುತ್ತಾರೆ. ಹೆಣ ಮಲಗಿಸಿದ ಪಲ್ಲಂಗವನ್ನು ಸರಿಸಿ ಆಯುಧಗಳ ಶೋಧ ನಡೆಸುತ್ತಾರೆ. ವೃದ್ಧ ಮಲಗಿದ ಪಲ್ಲಂಗದ ಕೆಳಗೆ ಶಸ್ತ್ರಾಸ್ತ್ರಗಳ ಬಚ್ಚಿಡುವ ಅಲ್ಪಸಂಖ್ಯಾತರ ಅಸಹಾಯಕ ಸ್ಥಿತಿಯ ಚಿತ್ರಣವಿದೆಯಲ್ಲ ಅದು ಹಿಂಸೆ ಮೂಡಿಸುವ ಅಸುರಕ್ಷಾ ಭಾವದ ಝಲಕ್.

ಅಲ್ಪಸಂಖ್ಯಾತರು ಆಕಸ್ಮಿಕವಾಗಿ ಮಾಡುವ ತಪ್ಪುಗಳು ಅಥವಾ ಭಯ ಭೀತಿಯಲ್ಲಿ ಅವರಿಂದಾಗುವ ತಪ್ಪುಗಳು, ತಮ್ಮ ರಕ್ಷಣೆಗೆ ಹೊಂದುವ ಅನಿವಾರ್ಯದ ಹತಾರು ಅವರು